# ಈಗ ಮಾಡೆಲೋ ರಾಮ ಧ್ಯಾನವ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 79.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 282.
3. **Note:** This song is not available in the books of Shri Betageri Krishna Sharma and Shri Bengeri Huchha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1. Singer has followed these lyrics.

ರಾಗ: ಕಾಂಬೋದಿ ತಾಳ: ಝಂಪೆ

ಈಗ ಮಾಡೆಲೋ ರಾಮ ಧ್ಯಾನವ ನೀ
ಮೂಕನಾಗಿರಬೇಡ ಎಲೆ ಮಾನವ || ಪ ||

ಕಾಲನ ದೂತರು ಕರೆವಾಗ ನೀ
ಕಾಲಗೆಟ್ಟು ಕಣ್ಣು ಬಿಡುವಾಗ
ನಾಲಿಗೆ ಸೆಳಕೊಂಡು ಜ್ಞಾನಗೆಟ್ಟಿರುವಾಗ
ನೀಲ ವರ್ಣನ ಧ್ಯಾನ ಬರುವುದೇನಯ್ಯ || ೧ ||

ಸತಿ ಸುತರೆಂಬ ಸಂಧಣಿಯೊಳು ನೀ
ಮತಿಭ್ರಷ್ಟನಾಗಿ ಮನದೊಳು
ಸತತ ಶ್ರೀ ಲಕ್ಷ್ಮೀಪತಿಯ ನೆನೆದರೆ ಸ-
ದ್ಗತಿ ಸನ್ಮಾರ್ಗ ಪಾರಂಪದವೀವನಯ್ಯ || ೨ ||

ಯಮದೂತರು ಬಂದು ಎಳೆವಾಗ ನೀ
ನವೆಯುತ್ತ ಹೊತ್ತು ಕಳೆವಾಗ
ಸಮದರ್ಶಿ ಪುರಂದರ ವಿಠಲನ ನಾಮವಾ-
ಸಮಯಕ್ಕೆ ಒದಗಿ ತಾ ಬರುವುದೇನಯ್ಯ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ಪಾರಂಪದ** – ಪರಮಪದ, ಮುಕ್ತಿ.

**ನವೆಯುತ್ತ** – ನೋವನ್ನು ಅನುಭವಿಸುತ್ತ, ಬಾಧೆಪಡುತ್ತ.

**ಸಮದರ್ಶಿ** – ವೈಷಮ್ಯ ನೈರ್ಘೃಣ್ಯಗಳಿಲ್ಲದೆ ಸಾಕ್ಷಿಕನಾಗಿರುವ.

**Classification:** Keethane
**Ankita:** purandara vittala
**Location:** NA
**Category:** Vidhi Chintane, vairagya,
**Sub-Category:** rama, Dhyana, nara, yama, kannu, nalige, jnana, patni, putra, mana, Narayana, Vishnu, Lakshmi, sadgati, vairagya,
**Pravachana:** NA
**Explanation:** NA